ಪೋಲೀಸ್‌ನವರಿಗೆ ಕಂಪ್ಲೇಂಟ್ ಕೊಟ್ಟರೂ ಅವರನ್ನು ಹಿಡಿಯಲಿಲ್ಲ. ಆದರೆ ಅವರ ಜೊತೆ ಸೇರಿ ರಕ್ಷಣೆ ಕೊಡುವ ಕೆಲಸವಾಯಿತು ಎನ್ನುವ ಆರೋಪ ಇದೆ. ಈ ಹಿನ್ನೆಲೆಯಲ್ಲಿ ನಾನು ಪ್ರಮುಖವಾಗಿ ಹೇಳುವುದೇನೆಂದರೆ, ಕಾನೂನು ಬಲಪಡಿಸಬೇಕು ಇದು ಒಂದು, ಇನ್ನೊಂದು ಅರಣ್ಯ ಕಳ್ಳರಿಗೆ ಶಿಕ್ಷೆ ಕೊಡುವುದಕ್ಕೆ ಬೇಕಾಗುವ ಕಾನೂನು ಬಲಪಡಿಸಬೇಕು. ಸರ್ಕಾರ ಅವರ ಆರ್‌ಎಫ್‌ಓ ವಲಯದಲ್ಲಿ ಎಸಿಎಫ್ ಬೇರೆ ಬೇರೆ ಡಿಎಫ್‌ಓ ಲೆವಲ್‌ನಲ್ಲಿ ಬೇಕಾಗಿರುವ ಕಾನೂನು ಬಲಪಡಿಸಬೇಕು. ಎರಡನೆಯದು ಸಿಬ್ಬಂದಿಯನ್ನು ಬಲಪಡಿಸಬೇಕು. ಇವತ್ತು ಗಾರ್ಡ್ ಪಾರೆಸ್ಟ್ ಲೆವಲ್‌ನಲ್ಲಿ ರಿಕ್ರ್ಯೂಟ್‌ಮೆಂಟ್ ಆಗುತ್ತಿಲ್ಲ.

1.20 ಪಿಎಂ.

ಅದರ ಮೇಲೆ ಕನ್ಸರ್ವೇಟರ್, ಅವರ ಮೇಲೆ ಅದು ಎಷ್ಟು ಜನ ಕನ್ಸರ್ವೆಟರ್ಸಗಳೋ, ಪಿ.ಸಿ.ಸಿ.ಎಫ್.ಗಳೋ, ಈ ಲೆವಲ್‌ನಲ್ಲಿ, ಅರಣ್ಯ ಭವನದಲ್ಲಿ ಅಧಿಕಾರಿಗಳು ಜಾಸ್ತಿ ಆಗುತ್ತಿದ್ದಾರೆಯೇ ಹೊರತು ಅರಣ್ಯ ಕಾಯುವಂತಹವರ ಸಂಖ್ಯೆ ಹೆಚ್ಚಾಗುತ್ತಿಲ್ಲ. ಮೂರನೆಯದಾಗಿ ಅವರಿಗೆ ಬೇಕಾಗಿರುವ ಆಗತ್ಯ ಶಸ್ತ್ರಾಸ್ತ್ರಗಳನ್ನು ಪೂರೈಸಿಕೊಡಬೇಕಾಗಿದೆ. ಕೊನೆಯದಾಗಿ ಸರ್ಕಾರವೂ ಕೂಡ ಯಾವುದೇ ಸಂದರ್ಭದಲ್ಲಿ ಅರಣ್ಯ ಅಧಿಕಾರಿಗಳನ್ನು ಡಿಮಾರಲೈಸ್ ಮಾಡದೆ ಅವರ ರಕ್ಷಣೆಗೆ ಬೇಕಾಗಿರುವಂಥ ಪ್ರಯತ್ನಗಳು ಆಗಬೇಕು. ಎಲ್ಲಿ ಅರಣ್ಯಾಧಿಕಾರಿಗಳೇ ಶಾಮೀಲಾಗಿದ್ದಾರೋ ಅಲ್ಲಿ ಅವರ ಮೇಲೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುವಂಥ ಪ್ರಯತ್ನವಾಗಬೇಕು. ಇದು ನನ್ನ ಕ್ಷೇತ್ರದಲ್ಲಿ ಆಗಿರುವಂಥ ಘಟನೆಯ ಹಿನ್ನೆಲೆಯಲ್ಲಿ ಹೇಳುತ್ತಾ ಇದ್ದೇನೆ. ನಿಷ್ಪಾವಂತ ಅಧಿಕಾರಿಗಳಿಗೂ ರಕ್ಷಣೆ ಆಗಬೇಕು ಮತ್ತು ಆ ಮೂಲಕ ಅರಣ್ಯದ ರಕ್ಷಣೆ ಕೆಲಸ ಕೂಡ ಆಗಬೇಕು. ಆ ರೀತಿಯಲ್ಲಿ ನೋಡಿಕೊಂಡು, ವಿಶೇಷವಾಗಿ ಯಾರು ತಪ್ಪಿತಸ್ಥ ಅಧಿಕಾರಿಗಳಿದ್ದಾರೋ ಅವರ ಮೇಲೆ ಎಂದು ನಿರ್ದಾಕ್ಷಿಣ್ಯವಾದಂಥ ಕ್ರಮ ಆಗಬೇಕು. ನಾನು ನನ್ನ ಕ್ಷೇತ್ರದ ರಾಮನಗೊಳ್ಳಿ ಅರಣ್ಯ ವಲಯಾಧಿಕಾರಿಗಳ ಮೇಲೆ ಏನು ಹಲ್ಲೆಯಾಗಿದೆ, ಇದರಿಂದಾಗಿ ನಮ್ಮ ಜಿಲ್ಲೆಯಲ್ಲಿ ಅರಣ್ಯ ಲೂಟಿ ಮಾಡುವಂತಹವರಿಗೆ ಸರ್ಕಾರದಿಂದಲೇ ಪ್ರೋತ್ಸಾಹ ಸಿಗುತ್ತಾ ಇದೆಯೇನೋ ಎನ್ನುವಂಥ ಭಾವನೆ ಬರುತ್ತಿದೆ. ಹಾಗಾಗಿ ಹಗಲು ರಾತ್ರಿ ದರೋಡೆಯೇ ನಡೆಯುತ್ತಿದೆ. ಅರಣ್ಯದ ಲೂಟಿ ಆ ರೀತಿಯಲ್ಲಿ ಆಗುತ್ತಿದೆ. ಆ ಹಿನ್ನೆಲೆಯಲ್ಲಿ ಮಾನ್ಯ ಸಚಿವರು ಇದಕ್ಕೆ ವಿಶೇಷವಾಗಿ ಸ್ಪಂದಿಸಿ ಆಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ನನ್ನ ಹತ್ತಿರ ಈ ದಿವಸಕ್ಕೆ ಬರತಕ್ಕಂಥ ಶೂನ್ಯ ವೇಳೆ ವಿಷಯಗಳಲ್ಲಿ ಮಾನ್ಯ ಸದಸ್ಯರ ಶೂನ್ಯ ವೇಳೆ ವಿಷಯ ಇರಲಿಲ್ಲ. ಆದಕಾರಣ ನಾನು ತಯಾರಾಗಿಲ್ಲ. ಮೇಲಾಗಿ ಯಾವುದನ್ನೂ ಅವರು ಸ್ಪೆಸಿಫಿಕ್ ಆಗಿ ಹೇಳಲಿಲ್ಲ. ಅವರು ಯಾವ ಒಂದು ವಿಷಯದ ಬಗ್ಗೆ ಹೇಳಿದ್ದಾರೆ. ನಾನು ಅದನ್ನು ಪರಿಶೀಲನೆ ಮಾಡುತ್ತೇನೆ. ಈ ಸದನ ಮುಗಿಯುವುದರೊಳಗೆ ಉತ್ತರ ಕೊಡುತ್ತೇನೆ.

ಶ್ರೀ ಎ.ಆರ್. ಕೃಷ್ಣಮೂರ್ತಿ:- ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು:- ನಾಳೆ ನಿಮಗೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನಲ್ಲಾ.

ಶ್ರೀ ಎ.ಆರ್.ಕೃಷ್ಣಮೂರ್ತಿ:- ಆಯಿತು.

ಅಧ್ಯಕ್ಷರು:- ಈಗ ಮೀನುಗಾರಿಕಾ ಇಲಾಖಾ ಮಂತ್ರಿಗಳಿಂದ ಉತ್ತರ.

ಶ್ರೀ ವಸಂತ ವಿ.ಸಾಲಿಯಾನ(ಮೀನುಗಾರಿಕೆ ಹಾಗೂ ಬಂದರು ಖಾತೆ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಮೀನುಗಾರಿಕಾ ಇಲಾಖೆ ಬಗ್ಗೆ ಮಾನ್ಯ ಜಯಪ್ರಕಾಶ್ ಹೆಗಡೆಯವರು, ಮಾನ್ಯ ಸಭಾಪತಿಯವರು ಮತ್ತು ಮಾನ್ಯ ಯೋಗೀಶ್‌ಭಟ್‌ರವರು ಅನೇಕ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ನಾನು ಅದನ್ನು ಸ್ವೀಕಾರ ಮಾಡಿದ್ದೇನೆ. ಮಾನ್ಯ ಜಯಪ್ರಕಾಶ್ ಹೆಗಡೆಯವರು ಮೀನುಗಾರಿಕೆ ಬಗ್ಗೆ ಕೆಲವೊಂದು ಮುಖ್ಯ ವಿಚಾರಗಳನ್ನು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ದಯವಿಟ್ಟು ಒಂದ್ನಿಮಿಷ ಮಾನ್ಯ ಮಂತ್ರಿಗಳೆ, ಮಾನ್ಯ ಅಧ್ಯಕ್ಷರೆ, ಈಗೇನೋ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಇಲ್ಲಿ 10 ವಿಷಯಗಳ ಡಿಮ್ಯಾಂಡ್ಸ್ ಇಟ್ಟಿದ್ದೀರಿ. ಆ ಹತ್ತು ವಿಷಯಗಳ ಮೇಲೆ ಎಲ್ಲರೂ ಮಾತನಾಡಿದ ಮೇಲೆ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ.

ಅಧ್ಯಕ್ಷರು:- ಈ ಮಂತ್ರಿಗಳು ಉತ್ತರ ಕೊಟ್ಟಮೇಲೆ ಡಾ।।ಪರಮೇಶ್ವರ್‌ರವರು ಉತ್ತರ ಕೊಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್:- ಇನ್ನೂ ಶಿಕ್ಷಣ ಹಾಗೂ ಬೇರೆ ಬೇರೆ ಇಲಾಖೆಗಳ ಬಗ್ಗೆ ಮಾತನಾಡುವವರು ಇದ್ದಾರೆ.

ಅಧ್ಯಕ್ಷರು:- ಇವೊತ್ತು ಉತ್ತರವನ್ನೇ ಕೊಡುವುದು. ನಿನ್ನೆ ನನ್ನ ಹತ್ತಿರವೇ ಮಾತನಾಡುವವರ ಲಿಸ್ಟ್ ಇತ್ತು. ಅದರಲ್ಲಿ ಸುಮಾರು 8 ಜನರ ಹೆಸರು ಕರೆದಾಗ ಒಬ್ಬರೂ ಪತ್ತೆ ಇರಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಸಾಯಂಕಾಲ 6-15ಕ್ಕೆ ಕರೆದರೆ ಯಾರು ಇರಬೇಕು? 6-15ಕ್ಕೆ ಹೇಳಿ.

ಅಧ್ಯಕ್ಷರು:- ನೋ, ನೋ ದಯವಿಟ್ಟು ಕ್ಷಮಿಸಿ, ನಿನ್ನೆ 6-10ಕ್ಕೆ ಕರೆದಿದ್ದೀವಲ್ಲಾ ನಿಮ್ಮಿಷ್ಟ. ಅಲ್ಲ, ಒಂದು ಕಡೆ ಉತ್ತರವೂ ಬೇಕು ಅಂತೀರಿ, ಈಗಾಗಲೇ ಎಲ್ಲಾ ಮಾತನಾಡಿದ್ದಾರೆ. ನಿನ್ನೆ 8 ಜನರನ್ನು ಕರೆದಿದ್ದೇವೆ. ಅವರೊಬ್ಬರೂ ಇರಲಿಲ್ಲ. ನಾನು ಏನು ಮಾಡಲಿ ಅದಕ್ಕೆ? ಕರೆದಾಗ ಅವರು ಇಲ್ಲದಿದ್ದರೆ ನಾವೇನು ಮಾಡುವುದು ಹೇಳಿ. please tell me.

ಶ್ರೀ ಜಗದೀಶ್ ಶೆಟ್ಟರ್:- 10 ವಿಷಯಗಳನ್ನು ತಾವು ಮಂಡನೆ ಮಾಡಿದ್ದೀರಿ. ಶಿಕ್ಷಣ ಇಲಾಖೆ ಬಗ್ಗೆ ಯಾರೊಬ್ಬರೂ ಮಾತನಾಡಿಲ್ಲ.

ಅಧ್ಯಕ್ಷರು:- ನಿಮ್ಮಿಷ್ಟ ಸ್ವಾಮಿ. ಅಲ್ಲ, ಕರೆದಾಗ ಅವರು ಬರದೇ ಇದ್ದರೆ ಹೇಗೆ? ಅವರಿದ್ದಾಗ ನಾವು ಕರೆಯುವುದಕ್ಕಾಗುತ್ತದೆಯೇ? ನೀವು ಕೊಟ್ಟಿರುವ ಪಟ್ಟಿ ಪ್ರಕಾರವೇ ನಾವು ಕರೆದಿದ್ದೇವೆ. ಒಬ್ಬರೂ ಇಲ್ಲದಿದ್ದರೆ ನಾವೇನ್ಮಾಡೋಣ?

ಶ್ರೀ ಜಗದೀಶ್ ಶೆಟ್ಟರ್:- ನಾವು ಅದನ್ನು ಒಪ್ಪಿಕೊಳ್ಳುತ್ತೇವೆ. ಆದರೆ 6-15ಕ್ಕೆ ಕರೆದರೆ ಎಷ್ಟು ಜನ ಮಾತನಾಡುವುದಕ್ಕೆ ಸಾಧ್ಯವಿದೆ?

ಅಧ್ಯಕ್ಷರು:- ಎಷ್ಟು ಜನ ಮಾತನಾಡಿಲ್ಲ ಹೇಳಿ. ಒಂದೊಂದು ಸಲ 7-00 ಗಂಟೆ, 7-30, 8-00 ಗಂಟೆಯವರೆಗೂ ಸದನ ನಡೆಸಿಲ್ಲವೇ?

ಶ್ರೀ ಜಗದೀಶ್ ಶೆಟ್ಟರ್:- 6-00 ಗಂಟೆ, 6-30ರವರೆಗೂ ಸಭೆ ನಡೆದಿರುವುದಷ್ಟೆ. ನೀವು 6-15ಕ್ಕೆ ನಾಲ್ಕೈದು ಮಂದಿ ಹೆಸರು ಕರೆದು ಬರಲಿಲ್ಲವೆಂದರೆ ಹೇಗೆ? ಶಿಕ್ಷಣ ಮಂತ್ರಿಗಳು

ಶಿಕ್ಷಣ ಇಲಾಖೆ ಬಗ್ಗೆ ಉತ್ತರ ಕೊಡುವುದು ಏನೂ ಇಲ್ಲ. ಉತ್ತರ ಕೊಡುವುದು ಏನೂ ಇಲ್ಲವೆಂದಂತಾಗುತ್ತದೆ.

ಅಧ್ಯಕ್ಷರು:– ನೀವೇ ಈ ರೀತಿ ಮಾಡಿದರೆ ಹೇಗೆ ಹೇಳಿ?

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಮೀನುಗಾರಿಕೆಯದ್ದು ಆಗಲಿ. ಮುಂದೆ ಉಳಿದಿವೆಯಲ್ಲಾ ಆ ವಿಷಯದ ಬಗ್ಗೆ ಮಾತನಾಡಲಿ. ಏಕೆಂದರೆ ಶಿಕ್ಷಣ ಇಲಾಖೆ ಬಗ್ಗೆ ಯಾರೂ ಮಾತನಾಡಿಲ್ಲ.

ಅಧ್ಯಕ್ಷರು:– ಆಯಿತು. I can allow upto 2'Clock today. ಆಮೇಲೆ ಮಧ್ಯಾಹ್ನ ಮೂರು ಗಂಟೆಗೆ ಉತ್ತರ. ಅಷ್ಟಾದರೂ ಮಾಡಿ ದಯವಿಟ್ಟು ಈಗ ಶಿಕ್ಷಣ ಇಲಾಖೆ ಬೇಡಿಕೆ ಬಗ್ಗೆ ಯಾರು ಮಾತನಾಡುತ್ತೀರಿ ಹೇಳಿಯಪ್ಪಾ.

4. ವಿತ್ತೀಯ ಕಾರ್ಯಕಲಾಪ

ಶಿಕ್ಷಣ ಇಲಾಖೆಯ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ

ಶ್ರೀ ಸಿ. ಗುರುಸ್ವಾಮಿ(ಚಾಮರಾಜನಗರ):– ಮಾನ್ಯ ಅಧ್ಯಕ್ಷರೆ, ಈ ಶಿಕ್ಷಣ ಇಲಾಖೆಯ ಬೇಡಿಕೆ ಮೇಲೆ ಮಾತನಾಡುವುದಕ್ಕೆ ನನಗೆ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತಾ, ಈಗ ಬಹು ಮುಖ್ಯವಾಗಿ ಪ್ರಾಥಮಿಕ ಶಿಕ್ಷಣ ಇಲಾಖೆ ಬಗ್ಗೆ ಪ್ರಸ್ತಾಪ ಮಾಡಲು ಇಚ್ಛಿಪಡುತ್ತೇನೆ. ನಿನ್ನೆ ಕೂಡ ನಾನು ಪ್ರಶ್ನೋತ್ತರ ವೇಳೆಯಲ್ಲಿ ಉಪಾಧ್ಯಾರುಗಳ ಕೊರತೆ ವಿಚಾರದಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾನು ಪ್ರಯತ್ನ ಪಟ್ಟೆ. ಆದರೆ ತಾವು ಅವಕಾಶವನ್ನು ನೀಡಲಿಲ್ಲ. ಇದಕ್ಕೆ ಕಾರಣ, ಆ ಒಂದು ಕ್ಷೇತ್ರಕ್ಕೆ ಸೀಮಿತವಾಗಿ ಪ್ರಶ್ನೆ ಇರುವುದರಿಂದ ಬೇರೆ ಪ್ರಶ್ನೆ ಹಾಕುವುದು ಬೇಡ ಎಂದು ಹೇಳಿದಿರಿ. ಮಾನ್ಯ ಅಧ್ಯಕ್ಷರೆ, ಈ ಶಿಕ್ಷಣ ಇಲಾಖೆ ಬಹಳ ಪ್ರಮುಖವಾದ ಒಂದು ಇಲಾಖೆ ಮತ್ತು ಈ ಸಮಾಜದಲ್ಲಿ ಶಿಕ್ಷಣ ಬಹಳ ಅತ್ಯಾವಶ್ಯಕ ಎಂದು ಮನಗಂಡು ಅದಕ್ಕೋಸ್ಕರವಾಗಿ ಬಹಳ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವುದು ಈ ಸರ್ಕಾರದ ಆದ್ಯ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಇದರಲ್ಲಿ ಏನಾಗಿದೆಯೆಂದರೆ ಉಪಾಧ್ಯಾಯರುಗಳ ಕೊರತೆ ಇದೆ, ಬಹುಶಃ ನಿನ್ನೆಯೂ ಕೂಡ ನನ್ನ ಕ್ಷೇತ್ರದ ಚೆನ್ನಪ್ಪನಪುರ ಎನ್ನುವ ಗ್ರಾಮದಲ್ಲಿ ಇಬ್ಬರು ಟೀಚರ್ ಇದ್ದರು, ಆ ಇಬ್ಬರು ಟೀಚರ್‌ಗಳಲ್ಲಿ ಒಬ್ಬರಿಗೆ ಡೆಪ್ಯುಟೇಷನ್ ಮಾಡಿ, ಇನ್ನುಳಿದ ಒಬ್ಬ ಟೀಚರ್‌ನ್ನು ಉಳಿಸಿಕೊಳ್ಳುವ ಹಾಗೆ ಮಾಡಿ ಇಡೀ ಗ್ರಾಮದವರು ಆ ಶಾಲೆಗೆ ಬೀಗ ಹಾಕಿ ಪ್ರತಿಭಟನೆ ಮಾಡಿ ಅಲ್ಲಿ ಶಾಲೆ ನಡೆಯದ ರೀತಿಯಲ್ಲಿ ಮಾಡಿದ್ದಾರೆ. ಹೀಗೆಯೇ ಕಳೆದ 15 ದಿವಸಗಳ ಹಿಂದೆ ಕೊತ್ತಲವಾಡಿ ಎನ್ನುವ ಗ್ರಾಮದಲ್ಲಿ 5 ಜನ ಟೀಚರ್‌ಗಳು ಇದ್ದುದರಲ್ಲಿ ಇಬ್ಬರಿಗೆ ಡೆಪ್ಯುಟೇಷನ್ ಮಾಡಿದಾಗ ಅಲ್ಲಿಯೂ ಕೂಡ ದೊಡ್ಡ ಗಲಾಟೆ ಆಗಿರತಕ್ಕಂಥದ್ದಾಗಿದೆ. ಈ ರೀತಿ ನನ್ನ ಕ್ಷೇತ್ರದ ಭಾಗಗಳಲ್ಲಿ, ಬಹುಶಃ ರಾಜ್ಯದ ಇತರ ಭಾಗಗಳಲ್ಲಿ ಈ ಒಂದು ಶಿಕ್ಷಕರ ಕೊರತೆಯಿಂದಾಗಿ ಇದು ಶಾಸಕರಿಗೆ ಒಂದು ದೊಡ್ಡ ತಲೆನೋವಾಗಿದೆ. ಈಗ ಅಲ್ಲಿಂದ ಡೆಪ್ಯುಟೇಷನ್ ಮಾಡಿಸಿದರೆ ಆ ಗ್ರಾಮದವರು ಬಂದು ನಮ್ಮ ಮೇಲೆ ಗಲಾಟೆ ಮಾಡುತ್ತಾರೆ. ಟೀಚರ್ ಕೊರತೆ ಇದ್ದರೆ, ಟೀಚರ್ ಸಾಲುವುದಿಲ್ಲವಾದ ಕಾರಣ ಟೀಚರ್ ಹಾಕಿಸಿಕೊಡಿ ಎಂದು ಗಲಾಟೆ ಮಾಡುತ್ತಾರೆ. ಈ ಗಲಾಟೆಯಲ್ಲಿ ಯಾವುದೇ ವಿಧವಾದ ಉಪಯೋಗವನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಮಾನ್ಯ ಪ್ರಾಥಮಿಕ ಶಿಕ್ಷಣ ಸಚಿವರ ಗಮನಕ್ಕೆ ತರಬಯಸುತ್ತೇನೆ; ಈ ಸಚಿವರು ಈ